ನಂ. 2. ತಾರೀಖು ೩ನೇ ಮೇ 1889.

ಮೈಸೂರು ಡಿಸ್ಟ್ರಿಕ್ಟ್ ಹುಣಸೂರು ಸಬ್ ರೆಜಿಸ್ಟ್ರಾರ್ರ ಆಫೀಸಿನಲ್ಲಿ ಈ ಕೆಳಗೆ ನಮೂದಿಸಿರುವ ಬೇವಾರಸಿ ದಸ್ತಾವೇಜುಗಳನ್ನು ಕ್ರಮವಾದ ವಾರಸದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳವಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು. ತಪ್ಪಿದಲ್ಲಿ ರೆಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ಪ್ರಕಾರ ನಾಶಪಡಿಸಲ್ಪಡುತ್ತೆ.

ನಂಬರು.	ದಸ್ತಾವೇಜನ್ನು ಬರೆದುಕೊಟ್ಟವನ ಹೆಸರು ಮತ್ತು ಅಡಿಸ್ಕ್ರಿಪ್ಷನ್.	ದಸ್ತಾವೇಜನ್ನು ಬರೆಸಿಕೊಂಡವರ ಹೆಸರು ಮತ್ತು ಅಡಿಸ್ಕ್ರಿಪ್ಷನ್.	ರೆಜಿಸ್ಟ್ರೇಷನ್ ಫೀಜು ಮುದ್ರೆಯ ಬಾಬ್ತು ಸಾಲಿಸ್ಟಾಂಪ್ ಬಾಬ್ತು	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
361 1886—87	ಬಳಕೆರೇಲಿರುವ ವೈಷ್ಣವಬ್ರಾಹ್ಮಣ ದೊಡ್ಡನಾರಣಪ್ಪನವರ ಮಗ ಕೃಷ್ಣಪ್ಪ	ಮೈಸೂರು ದೇವರಾಜ ಮೊಹಲ್ಲಾದಲ್ಲಿರುವ ಕುಂಚಿಗರ ಕಮತಿಯ ದೊಡ್ಡಯ್ಯನಮಗ ಕುಮಾರಿ ಸಿದ್ದಲಿಂಗಣ್ಣ	87 ೧ ೨	87 ೧ ೨	ಹಾರುಹಳ್ಳಿ ಗ್ರಾಮದ ಜಮ್ಮಾ ಕ್ರಯಪತ್ರ ಮೊಬಲಗು 15 ರೂಪಾಯಿ.
362 1886—87	ಮೈಸೂರು ದೇವರಾಜ ಮೊಹಲ್ಲಾದಲ್ಲಿರುವ ಕುಂಚಿಗರಜಾತಿ ಕಮತೀ ದೊಡ್ಡಯ್ಯನ ಮಗ ಕಮತೀ ಸಿದ್ದಲಿಂಗಣ್ಣ	ಮೈಸೂರು ಹಾಲ್ಲೂರು ರಾಮನಹಳ್ಳಿಲಿರುವ ಯಲೇ ಚಿಣಜಿಗರ ಜಾತಿ ಈರಶೆಟ್ಟಿಮಗ ಅಮ್ಮತಿತಿಮರೆವಾಸಯ್ಯ	87 ೧ ೨	87 ೧ ೨	ಆಯರಹಳ್ಳಿ ಗ್ರಾಮದ ಜಮ್ಮಾ ಕ್ರಯಪತ್ರ ಮೊಬಲಗು 50 ರೂಪಾಯಿ.

ಯಂ. ರಾಮಸ್ವಾಮಯ್ಯರ್,
ಥರ್ ರೆಜಿಸ್ಟ್ರಾರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 30ನೇ ಮೇ 1889.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟು ಮಂಜರಾಬಾದು ತಾಲ್ಲೂಕಿನ ಈ ಕೆಳಗೆ ನಮೂದಾಗಲ್ಪಡುವ ಜಮ್ಮಾ ಕಾಫೀ ತೋಗುವಳಿಗೋಸ್ಕರ ಇದರ ಕೆಳಗಿನ ಸ್ಟೇಟ್ಮೆಂಟಿನ ಷರಾ ಕಾಲಂನಲ್ಲಿ ನಮೂದಾಗುವ ತಾರೀಖು ಮತ್ತು ಸ್ಥಳದಲ್ಲಿ ಮಂಜರಾಬುದು ತಾಲ್ಲೂಕು ಅಮಲ್ದಾರ್ರವರ ರೂಬರೂ ಹಾಸನ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ನಾಜೇಬರವರ ಮಂಜೂರಾತಿಗೆ ಪೊಳಪಟ್ಟು ಹರಾಜ್ ಮಾಡಿಸಲ್ಪಡುವದು.

2. ಈ ಹರಾಜ್ ಬಹಿರಂಗವಾಗಿ ದಸ್ತೂರ್ ಪ್ರಕಾರ ಅನುಸರಿಸಿ ಗೊತ್ತಾಗಲ್ಪಟ್ಟ ಎಕರೆಗೆ 10 ರೂಪಾಯಿಗಳ ಮೇಲೆ ಚಡ ದರಖಾಸ್ತು ಮಾಡುವದರ ಹೆಸರಿಗೆ ಬೈಡ್ ಮಾಡಲ್ಪಡುವದು. ದರಖಾಸ್ತುದಾರನಿಂದ ಹಾಜರ್ಮಾಡಲ್ಪಟ್ಟು ಗೊತ್ತಾಗಲ್ಪಟ್ಟ ಖರೀದಿಯ ನಾಲ್ಕರಲ್ಲಿ ಬಂದು ಭಾಗದ ಡಿಪಾಜಿಟ್ ಹಣವು ದರಖಾಸ್ತುದಾರನ ಹೆಸರಿಗೆ ಹರಾಜು ನಿಂತಪಕ್ಷ ಅವನು ಈ ನೋಟಿಸ್ 4ನೇ ಕ್ಲಾಸು ಮೇರಿಗೆ ಕೊಡಬೇಕಾದ ಕೇಕಡಾ 25 ರೂಪಾಯಿ ಹರಾಜ್ ಹಣದ ಡಿಪಾಜಿಟ್ಟಿಗೆ ವಜಾ ಮಾಡಲ್ಪಡುವದು, ಮತ್ತು ಇತರರು ಚಡದರಖಾಸ್ತು ಮಾಡಿ ಅವರಿಗೇನೇ ನಿಂತಪಕ್ಷ ದರಖಾಸ್ತುದಾರನ ತೇವಣಿಯು ವಾಪಸ್ ಮಾಡಲ್ಪಡುವದು.

3. ಗೊತ್ತಾಗಲ್ಪಟ್ಟ ಖರೀದಿಯು ಸರ್ವೇ ಖರ್ಚನ್ನು ಆಪಗಿಸಿಕೊಂಡು ಯಿರುತ್ತಲ್ಲದೆ ಸಂದಲ್ ವಿನಹ ವುಳಿಸಿಕೊಳ್ಳಲ್ಪಟ್ಟ ಜಾತಿ ಯಲ್ಲ ಮರಗಳ ಗವರ್ಮೆಂಟ್ ಹಕ್ಕನ್ನೂ ಕೇಳಿಸಿಕೊಂಡು ಯಿರುತ್ತೆ. ಸಂದಲ್ ಯಾವಾಗ್ಯೂ ಸರ್ಕಾರದ ಹಕ್ಕಿನದೇ ಆಗಿ ಯಿರುತ್ತೆ.

4. ಚಡದರಖಾಸ್ತುದಾರನು ಹರಾಜ್ ಖೈದಾದ ವಡನೆಯೇ ಕೇಕಾಡಾ 25 ರೂಪಾಯಿಗಳ ಮೇರೆ ಕೊಡಬೇಕಲ್ಲದೆ ಬಾಕಿ ಹಣವನ್ನ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಹರಾಜಾದ ತಾರೀಖು ಲಾಗಾಯತು 15ನೇ ತಾರೀಖಿನ ದಿವಸದ ಸೂರ್ಯಾಸ್ತಮಯದೊಳಗೆ ಕೊಡಬೇಕು. ಹಾಗೆ ಕೊಡದೇ ತಪ್ಪಿದಲ್ಲಿ ಡಿಪಾಜಿಟ್ ಯಿಟ್ಟು ಸೊಬಲಗು ದಂಡವಾಗಿ ತೆಗದುಕೊಳ್ಳುವದಲ್ಲದೆ ಹರಾಜಿನಲ್ಲಿ ತೆಗದುಕೊಂಡವನ ಅವಗುಣಕ್ಕಾಗಿ ಪುನ್ಹ ಹರಾಜ್ ಮಾಡಿಸಲ್ಪಡುವದು. 2ನೇ ಹರಾಜಿನಲ್ಲಿ ಕಮ್ಮಿ ಆಗುವ ಹಣವನ್ನು ಮೊದಲ ಹರಾಜ್ದಾರನಿಂದ ವಸೂಲ್ಮಾಡಲ್ಪಡುತ್ತೆ.

5. ಈ ರೂಲ್ಸ್ ಅನುಸರಿಸಿ ಹರಾಜ್ ಮಾಡಲ್ಪಟ್ಟ ಜಮ್ಮಾನು ಮೂರು ವರುಷ ಮುಫತ್ತಾಗಿಯೂ ನಂತರ ಯರಡು ವರುಷ ಅರ್ಧ ಕಂದಾಯಕ್ಕೂ ಆರನೇ ವರುಷದಿಂದ ಪೂರಾ ಕಂದಾಯಕ್ಕೂ ಕೊಡಲ್ಪಡುವದು. ಈ ರಿಯಾಯಿತಿಯನ್ನು ತೋರಿಸುವದಕ್ಕೆ ಮುಂಚೆ ಚಡ ದರಖಾಸ್ತುದಾರನು ಸದರ ಜಮ್ಮಾನಿನಲ್ಲಿ ಯಿರತಕ್ಕ ತೋಗುವಳೀಲಾಯಕ್ ಪ್ರದೇಶವನ್ನು ನಿಜವಾಗಿಯೂ ಗಿಡಹಾಕುವದಕ್ಕೆ ಯತ್ನಪಡದೆ ಆಡವಿಯನ್ನು ತೆಗದು ಮರಗಳನ್ನು ಕಡಿದು ರಾವೇನಾಮೆ ಕೊಟ್ಟಲ್ಲದೇ ಆದರೆ ಮೊದಲ್ ವರುಷದ ಲಾಗಾಯತು ಪೂರಾ ಕಂದಾಯವನ್ನೂ ಸರಕಾರಕ್ಕೆ ಕೊಡಲು ಬದ್ಧನಾಗಿ ಮುಚ್ಚಳಿಕೆ ಬರೆದು ಕೊಡಬೇಕು.

ಸ್ಟೇಟ್‌ಮೆಂಟ್.

ಸರ್ವೇ ನಂಬರ್.	ದರಖಾಸ್ತು ದಾರನ ಹೆಸರು.	ಜಮೀನು ಇರುವ ಹಳ್ಳಿಯ ಹೆಸರು.	ಚಕ್ಕುಬಂದಿ.	ದರಖಾಸ್ತು ಜಮೀನು. ವಿಸ್ತೀರ್ಣ. ಎಕರೆ.	ಗುಂಟೆ.	ಆಕಾರ.	ಹರಾಜು ತಾರೀಖು ಮತ್ತು ಸ್ಥಳ.
33	ಮೆ|| ಜಿ. ಜೆ. ಕೆ. ಬ್ರದರ್ಸ್.	ದೈತಾಪುರ.	ಸರ್ವೆ ನಂಬರು 25ರ ಪೈಕಿ ಹೊಸದಾಗಿ ಫೂಡು ಮಾಡಿದ್ದು.	53	22	ಚಡದರಖಾಸ್ತುದಾರರ ಅಪೇಕ್ಷೆಯಂತೆ ಕಾಯಂದರ ಎಕರೆ 1ಕ್ಕೆ ರೂ|| ಬಾವ ತಾಲ್ಲೂಕು ಕಚೇರಿಯಲ್ಲಿ. ಪಾಯಿ 1-8-0 ಹಂಗಾಮಿ ರೂಪಾಯಿ 1	1889ನೇ ಜುಲೈ ತಾರೀಖು 25ನೇ ಗುರುವಾರ ಮಂಜರಾ

ಪಿ. ಎ. ಪೂರ್ಣಯ್ಯ,
ಡೆಪ್ಯೂಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರ ಆಫೀಸಿನಿಂದ.

ತಾರೀಖು 18ನೇ ಮೇ 1889.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟು ಕಡೂರು ತಾಲ್ಲೂಕಿನಲ್ಲಿ ಕುರಂಗದಕಲ್ಲನ್ನ ಜವಾಯಿ ಸಿ ಕೊಳ್ಳತಕ್ಕ ಹಕ್ಕುದಾರಿ ಕಡೂರು ತಾಲ್ಲೂಕು ಕಚೇರಿಯಲ್ಲಿ ಸನ 1889ನೇ ಇಸವಿ ಜುಲೈ ತಾರೀಖು 26ನೇ ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

2. ಆಮೆಲ್ದಾರ್ ಅಥವಾ ಶಿರಸ್ತೇದಾರ್ ಹರಾಜು ಮಾಡಿಸುವರು,

3. ಈ ಹರಾಜಿನ ಚಡದರಖಾಸ್ತು ಕಡೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರು ಮಾಡುವ ಪರಿಯಂತರ ಖಾಯಮಾದ್ದಾಗಿ ತಿಳಿದು ಕೊಳ್ಳಕೂಡದು.

4. ಈ ಇಜಾರೆಯು ಸನ 1890ನೇ ಇಸವಿ ಮಾರ್ಚಿ 31ರ ವರೆಗೆ ಜಾರಿಯಲ್ಲಿ ಇರತಕ್ಕದ್ದು.

5. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೀಕಡಾ 25 ರೂಪಾಯಿ ನಂತೆ ಆಗುವ ಮೊಬಲಗನ್ನ ಡಿಪಾಜಿಟ್ ಇಡಬೇಕಲ್ಲದೆ ಹರಾಜು ಮಂಜೂರು ಮಾಡಲ್ಪಟ್ಟ ಸಂಗತಿ ಡೆಪ್ಯೂಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟಕಾಲದಿಂದ ಮೊದಲು 7 ದಿವಸದ ಒಳಗಾಗಿ ಕ್ರಯದ ಒಟ್ಟು ಮೊಬಲಗಿನ ಮೇಲೆ ರೂಪಾಯಿ ಬಂದಕ್ಕೆ ವಂದಾಣಿಯಂತೆ ಆಗುವ ಲೋಕಲ್‌ಸೆಸ್ಸನ್ನು ವೇಬೀಲ್ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ ಯಿಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದು ಕೊಳ್ಳಲ್ಪಡುವದು ಹಾಗೆ ಡಿಪಾಜಿಟ್ ಮೊಬಲಗು ಹಾಜರಮಾಡದಿದ್ದರೂ ಅಥವಾ ಬಾಕಿ ಕ್ರಯದ ಮೊಬಲಗು ಪಾವತಿ ಮಾಡದಿದ್ದರೂ ಹಕ್ಕುದಾರಿಯು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಒಳಪಟ್ಟು ಪುನಃ ವಿಕ್ರಯಿಸಲ್ಪಡುವದು

6. ಹರಾಜು ಷರತ್ತುಗಳು.

(a) ಹಿಡುವಳಿ ಜಮೀನಿನಲ್ಲಿ ಯಿರತಕ್ಕ ಕಲ್ಲುಗಳನ್ನು ತೆಗದುಕೊಳ್ಳಬೇಕಾದರೆ ಹಿಡುವಳಿದಾರನ ಸಂಮತಿಯನ್ನ ಪಡಿಯಬೇಕು ಜಮೀನು ಹಿಡುವಳಿದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲೂಕೂಡದು. ಇಜಾರೆದಾರನಿಗೆ ಮಾರಬೇಕೆ ಹೊರ್ತು ಯಿತರ ಜನಗಳಿಗೆ ಮಾರಲೂ ಕೂಡದು.

(b) ಇಜಾರೆದಾರನು ಹುಲ್ಲುಬನ್ನಿ ಇಜಾರೆದಾರರ ಚಲಾವು ಹಕ್ಕಿನಲ್ಲಿ ಪ್ರವೇಶಿಸಕೂಡದು.

(c) ಬಂಜರುಜಮೀನುಗಳು ಸಾಗುವ / ಬಗ್ಗೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟುಬಿಡುವದಕ್ಕೆ ಕುರಂಗದ ಇಜಾರೆದಾರನು ಅಡ್ಡಿಹೇಳಕೂಡದು ಅಂಥಾ ಜಮೀನುಗಳಲ್ಲಿ ಕುರಂಗದ ಕಲ್ಲುಗಳನ್ನು ತೆಗದುಕೊಳ್ಳತಕ್ಕ ಹಕ್ಕು ಮಾತ್ರ ಇಜಾರೆದಾರನಿಗೆ ವುಂಟು ಯಿರುತ್ತೆ.

(c) ಯಿಜಾರೆದಾರನು ಕಲ್ಲುಗಳಿಗೋಸ್ಕರ ಜಮೀನುಗಳನ್ನು ಅಗಿಸಾಕೂಡದು ವೊಂದು ವೇಳೆ ಹಾಂಗೆ ಆಗದಲ್ಲಿ ಆಗುಂಡಿಗಳನ್ನ ತಕ್ಷಣ ಮುಚ್ಚಿಬಿಟ್ಟು ಸಾಗುವಳಿಗೆ ಜಮೀನು ಲಾಯಖಿಯಿರುವ ಹಾಗೆ ಮಾಡಬೇಕು.

ಜಿ. ಜೆ. ಮೈಕೆಲ್ಜರ್ಜ್,
ಡೆಪ್ಯೂಟಿ ಕಮ್ಮಿಷನರ್.